# ಎಜುಸ್ಯಾಟ್

## ವೀಡಿಯೋ ಚಿತ್ರ ಪ್ರಸಾರ (ಕೈಪಿಡಿ)

### 2013 ಜುಲೈ 5 ರಿಂದ 2014 ಫೆಬ್ರುವರಿ 28ರ ವರೆಗೆ

## ವಿದ್ಯಾವಾಹಿನಿ

## ಅಂತರ್ ಕ್ರಿಯಾತ್ಮಕ ಕಾರ್ಯಕ್ರಮ ಪ್ರಸಾರ

## ವಾರ್ಷಿಕ ವೇಳಾಪಟ್ಟಿ

# 2013-2014


ನಿರ್ದೇಶಕರ ಕಛೇರಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು - 560 0085

ದೂರವಾಣಿ ಸಂಖ್ಯೆ : 080-26422372, 26422373, 26422374, 26422242

ಫ್ಯಾಕ್ಸ್ : 080-26422375

ಹಾಗೂ

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

ಕೆ.ಆರ್. ವೃತ್ತ, ನೃಪತುಂಗ ರಸ್ತೆ, ಬೆಂಗಳೂರು - 560 001.

## ಎಜುಸ್ಯಾಟ್ - ವಿದ್ಯಾವಾಹಿನಿ ಶೈಕ್ಷಣಿಕ ವೀಡಿಯೋ ಚಿತ್ರ ಪ್ರಸಾರ

(3 ರಿಂದ 8 ನೇ ತರಗತಿ ವರೆಗಿನ ಆಯ್ದ ಪಾಠಗಳು)


| | | |
|---|---|---|
| ಪ್ರಥಮ ಮುದ್ರಣ | : | 2012-2013<br>ಪರಿಷ್ಕರಣೆ ಮತ್ತು ಮುದ್ರಣ 2013-14 |
| ಪ್ರತಿಗಳು | : | 3500 |
| ಹಕ್ಕುಗಳು | : | ನಿರ್ದೇಶಕರು, ಡಿ.ಎಸ್. ಇ.ಆರ್.ಟಿ.<br>100, ಅಡಿ ವರ್ತುಲ ರಸ್ತೆ<br>ಬನಶಂಕರಿ 3ನೇ ಹಂತ<br>ಬೆಂಗಳೂರು - 560 085 |
| ಮುದ್ರಣ | : | ಕುಸುಮ ಪ್ರಿಂಟರ್ಸ್<br>ನಂ.1, ಬಿನ್ನಿಮಿಲ್ ರಸ್ತೆ<br>ಕಾಟನ್‌ಪೇಟೆ, ಬೆಂಗಳೂರು-560 053.<br>ದೂರವಾಣಿ : 080-26704734 |

# ಪ್ರಸ್ತಾವನೆ

ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸರ್ಕಾರವು ಹಲವು ಯೋಜನೆಗಳನ್ನು ಹಮ್ಮಿಕೊಂಡಿದೆ. ತಂತ್ರಜ್ಞಾನವನ್ನು ಬಳಸಿ ಕಲಿಸುವಿಕೆ ಮತ್ತು ಕಲಿಯುವಿಕೆಯ ಪ್ರಕ್ರಿಯೆಗಳನ್ನು ಉದ್ದೀಪಿಸಲು ಎಜುಸ್ಯಾಟ್ ಯೋಜನೆಯನ್ನು ಜಾರಿಗೆ ತರಲಾಗಿದೆ. ಕಲಿಸಲು ಕಷ್ಟ ಎಂದು ಗುರುತಿಸಲಾಗಿರುವ ಪಠ್ಯಾಂಶಗಳನ್ನು ತಜ್ಞರ ಮಾರ್ಗದರ್ಶನದಲ್ಲಿ ದೃಶ್ಯ ಮಾಧ್ಯಮಕ್ಕೆ ಅಳವಡಿಸಿ ಚಿತ್ರಗಳನ್ನು ತಯಾರಿಸಿ ಉಪಗ್ರಹದ ಮೂಲಕ 2004–2005ನೇ ಸಾಲಿನಿಂದ ಚಾಮರಾಜನಗರ ಜಿಲ್ಲೆಯ 885, ಕೆಂಚೇನಹಳ್ಳಿ ಹೋಬಳಿ, ಹೆಗ್ಗಡದೇವನ ಕೋಟೆ ಬ್ಲಾಕ್‌ನ 13 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಇಸ್ರೋ ಸಂಸ್ಥೆಯ ನೆರವಿನೊಂದಿಗೆ ಜಾರಿಗೊಳಿಸಲಾತು. ಈ ಯೋಜನೆಯನ್ನು 2005–06ನೇ ಸಾಲಿನಲ್ಲಿ ಗುಲ್ಬರ್ಗ ಜಿಲ್ಲೆಯ 885 ಹಿರಿಯ ಪ್ರಾಥಮಿಕ ಶಾಲೆಗಳಿಗೆ, 2008–09ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ 427, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 406 ಶಾಲೆಗಳಿಗೂ ವಿಸ್ತರಿಸಲಾಗಿದೆ.

3ನೇ ತರಗತಿಯಿಂದ 8ನೇ ತರಗತಿವರೆಗೆ ಕನ್ನಡ, ಆಂಗ್ಲಭಾಷೆ, ಪರಿಸರ ಅಧ್ಯಯನ, ವಿಜ್ಞಾನ, ಗಣಿತ ಹಾಗೂ ಸಮಾಜ ವಿಜ್ಞಾನ ವಿಷಯಗಳಲ್ಲಿನ ಕಠಿಣಾಂಶಗಳನ್ನು ಆಧರಿಸಿ ಚಿತ್ರಗಳನ್ನು ತಯಾರಿಸಿ ಸೆಮಿಸ್ಟರ್ ಅವಧಿಗನುಸಾರವಾಗಿ ಪ್ರಸಾರ ಮಾಡಲಾಗುತ್ತಿದೆ. 2013–14ನೇ ಸಾಲಿನ 5 ಮತ್ತು 8ನೇ ತರಗತಿಯ ಪರಿಷ್ಕೃತ ಪಠ್ಯಪುಸ್ತಕಕ್ಕೆ ತಕ್ಕಂತೆ 42 ಚಿತ್ರ ಪಾಠಗಳನ್ನು ಹೊಸದಾಗಿ ರಚಿಸಿ ಪ್ರಸಾರ ಮಾಡುತ್ತಿರುವುದು ವಿಶೇಷವಾಗಿದೆ. ಇದರ ಪೂರ್ಣ ಯಶಸ್ವೀ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಮತ್ತು ಶಿಕ್ಷಕರನ್ನು ಅವಲಂಭಿಸಿದ್ದು, ಈ ದಿಶೆಯಲ್ಲಿ ಸಹಕಾರಿಯಾಗಲೆಂದು ಕೈಪಿಡಿಗಳನ್ನು ಮುದ್ರಿಸಿ ಸರಬರಾಜು ಮಾಡಲಾಗಿದೆ.

ಸಂಬಂಧಿಸಿದವರೆಲ್ಲರೂ ಜವಾಬ್ದಾರಿಗಳನ್ನು ಅರಿತು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತಾರೆಂಬ ಆಶಯವನ್ನು ಹೊಂದಿರುತ್ತೇನೆ.

ಕಾರ್ಯಕ್ರಮದ ಸಂಪೂರ್ಣ ಪ್ರಯೋಜನ ಪಡೆದು, ಶಿಕ್ಷಕರು, ಫಲಾನುಭವಿಗಳು ಹಾಗೂ ಸಮುದಾಯದವರು ಹಿಮ್ಮಾಹಿತಿಯನ್ನು ನೀಡಬೇಕೆಂದೂ ಕೋರುತ್ತೇನೆ.

ಸ್ಥಳ : ಬೆಂಗಳೂರು
ದಿನಾಂಕ : 01–07–2013

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.

## 'ಎಜುಸ್ಯಾಟ್' ಪ್ರಸಾರ ಕೈಪಿಡಿ

## ಪರಿಕಲ್ಪನೆ ಹಾಗೂ ಮಾರ್ಗದರ್ಶನ

**ಶ್ರೀ ಸುಭೋದ ಯಾದವ್** ಭಾ.ಆ.ಸೇ.
ರಾಜ್ಯ ಯೋಜನಾ ನಿರ್ದೇಶಕರು
ಎಸ್.ಎಸ್.ಎ., ಬೆಂಗಳೂರು

**ರಾಷ್ಟ್ರ ನಿರ್ದೇಶಕರು**
ಇ.ಡಿ.ಸಿ., ಬೆಂಗಳೂರು

**ಶ್ರೀ ಹೆಚ್. ಎಸ್. ರಾಮರಾವ್**
ನಿರ್ದೇಶಕರು ಡಿ.ಎಸ್.ಇ.ಆರ್.ಟಿ
ಬೆಂಗಳೂರು

**ಶ್ರೀಮತಿ ಯಶೋದ ಬೋಪಣ್ಣ**
ಸಹ ನಿರ್ದೇಶಕರು (ಆಡಳಿತ)
ಡಿ.ಎಸ್.ಇ.ಆರ್.ಟಿ ಬೆಂಗಳೂರು

**ಶ್ರೀಮತಿ ಲಲಿತ ಸಿಯಣ್ಣನವರ**
ಉಪ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ ಬೆಂಗಳೂರು

### ಚಿತ್ರಪಾಠಗಳ ರಚನೆಗೆ ಸಲಹೆ ಮತ್ತು ಮಾರ್ಗದರ್ಶನ

**ಡಾ|| ಎಚ್. ಎಸ್. ವೆಂಕಟೇಶ್‌ಮೂರ್ತಿ**
ಅಧ್ಯಕ್ಷರು
ತಾಂತ್ರಿಕ ಸಲಹಾ ಸಮಿತಿ
(ಎಜುಸ್ಯಾಟ್ ಚಿತ್ರ ರಚನೆ ಮತ್ತು ರೇಡಿಯೊ ಪಾಠ ರಚನೆ)
ಡಿ.ಎಸ್.ಇ.ಆರ್.ಟಿ ಬೆಂಗಳೂರು

### ವಿಷಯ ಮುಖ್ಯಸ್ಥರು ಹಾಗೂ ಕೈಪಿಡಿ ರಚನಾ ತಂಡ

**ಕನ್ನಡ**
**ಡಾ|| ಮುಳುಕುಂಟೆ ರಮೇಶ್**
ಕನ್ನಡ ಪ್ರಾಧ್ಯಾಪಕರು
ರಾಗೀಗುಡ್ಡ ಪ್ರೌಢಶಾಲೆ
ಜಯನಗರ 9ನೇ ಬಡಾವಣೆ
ಬೆಂಗಳೂರು – 560 006

**ಇಂಗ್ಲಿಷ್**
**ಪ್ರಾದೇಶಿಕ ಆಂಗ್ಲಭಾಷಾ ಸಂಸ್ಥೆ**
ದಕ್ಷಿಣ ಭಾರತ,
ಜ್ಞಾನ ಭಾರತಿ ಆವರಣ
ಬೆಂಗಳೂರು

**ವಿಜ್ಞಾನ**
**ಶ್ರೀ ಎ.ಬಿ. ಕಟ್ಟಿ**
ನಿವೃತ್ತಮುಖ್ಯ ಶಿಕ್ಷಕರು
ವಿದ್ಯಾರಣ್ಯಪುರ
ಬೆಂಗಳೂರು

**ಪರಿಸರ ಅಧ್ಯಯನ / ವಿಜ್ಞಾನ / ಗಣಿತ**
**ಶ್ರೀಮತಿ ವಾಸಂತಿ ರಾವ್**
ನಿವೃತ್ತ ಶಿಕ್ಷಕಿ, ನಂ. 1067,
11ನೇ ಮುಖ್ಯರಸ್ತೆ, ಪಶ್ಚಿಮ ಕಾರ್ಡ್ ರಸ್ತೆ
2ನೇ ಹಂತ, ಬೆಂಗಳೂರು – 86

**ಸಮಾಜ ವಿಜ್ಞಾನ**
**ಶ್ರೀಮತಿ ಕೆ. ವಿಜಯಲಕ್ಷ್ಮಿದೇವಿ**
ನಿವೃತ್ತ ಶಿಕ್ಷಕಿ,
ಕೆಂಗೇರಿ ಉಪನಗರ
ಬೆಂಗಳೂರು.

**ಶ್ರೀಮತಿ ಎಸ್.ಎನ್. ಶೈಲಜಾ**
ಕಾರ್ಯಕ್ರಮ ಅಧಿಕಾರಿಗಳು
ಸರ್ವಶಿಕ್ಷ ಅಭಿಯಾನ
ಇ.ಡಿ.ಸಿ., ಬೆಂಗಳೂರು

**ಸಮನ್ವಯ:**
**ಪಿ. ಬೈಲಾಂಜಿನಪ್ಪ**
ಹಿರಿಯ ಸಹಾಯಕ ನಿರ್ದೇಶಕರು
ಎಜುಸ್ಯಾಟ್ ಶಾಖೆ,
ಡಿ.ಎಸ್.ಇ.ಆರ್.ಟಿ.,
ಬೆಂಗಳೂರು

**ಸಹಾಯ :**

**ಶ್ರೀ ಎಸ್. ಎನ್. ಸುರೇಶ್**
ಸಹಾಯಕ ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.,
ಬೆಂಗಳೂರು

**ಶ್ರೀ ಮಲ್ಲೇಶ್**
ಅಧೀಕ್ಷಕರು
ಡಿ.ಎಸ್.ಇ.ಆರ್.ಟಿ.,
ಬೆಂಗಳೂರು

**ಶ್ರೀ ಸಯ್ಯದ್ ಷಫಿ ಉಲ್ಲಾ**
ಪ್ರ.ದ. ಸಹಾಯಕರು
ಡಿ.ಎಸ್.ಇ.ಆರ್.ಟಿ.,
ಬೆಂಗಳೂರು

**ನಿರ್ದೇಶಕರ ಕಛೇರಿ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ**
**100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು – 560 085.**

ಸಂಖ್ಯೆ : ಇಟಿಸಿ 4/ ಎಜುಸ್ಯಾಟ್ / ಆರ್‌ಓಟಿ / 2013–14 ದಿನಾಂಕ : 01–7–2013

## ಸುತ್ತೋಲೆ

### ವಿಷಯ : ಎಜುಸ್ಯಾಟ್ ಕಾರ್ಯಕ್ರಮ ಬಗ್ಗೆ

**ಹಿನ್ನೆಲೆ :**

ಇಲಾಖೆಯು ಸುಮಾರು 10 ವರ್ಷಗಳಿಂದ ಉಪಗ್ರಹ ಆಧಾರಿತ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದು ಯಶಸ್ಸನ್ನು ಗಳಿಸಿದೆ. ಟೆಲಿಕಾನ್ಫರೆನ್ಸ್‌ನಲ್ಲಿ ಶಿಕ್ಷಕರಿಗೆ, ಸಂಪನ್ಮೂಲ ವ್ಯಕ್ತಿಗಳಿಗೆ, ಆಡಳಿತಾಧಿಕಾರಿಗಳಿಗೆ ಅಗತ್ಯ ಕ್ಷೇತ್ರದಲ್ಲಿ ತರಬೇತಿ ನೀಡಲಾಗಿದ್ದು, ಅಲ್ಲದೆ ಉಪಗ್ರಹ ಆಧಾರಿತ ಕಾರ್ಯಕ್ರಮಗಳಿಗೆ ಜಿಲ್ಲೆಗೆ 1 ಅಥವಾ 2 ಸ್ವೀಕೃತಿ ಕೇಂದ್ರಗಳಿರುತ್ತಿದ್ದವು ಮತ್ತು ವಿಸ್ತರಣಾ ಬ್ಯಾಂಡ್ ಮೂಲಕ ಕಾರ್ಯಕ್ರಮಗಳು ಮೈಸೂರಿನಿಂದ ಪ್ರಸಾರವಾಗುತ್ತಿದ್ದವು. ಈ ಕಾರ್ಯಕ್ರಮ ಯಶಸ್ವಿಯಾಗಿರುವುದನ್ನು ಕಂಡು ತರಗತಿ ಮತ್ತು ವಿಷಯವಾರು ಮಕ್ಕಳಿಗೆ ಶೈಕ್ಷಣಿಕ ವಿಡಿಯೋ ಚಿತ್ರಗಳನ್ನು ತಯಾರಿಸಿ ಕೆ.ಯು. ಬ್ಯಾಂಡ್ ಮೂಲಕ ಪ್ರಸಾರ ಮಾಡಲು ಬೃಹತ್ ಮತ್ತು ಪ್ರಾಯೋಜಿತ ಯೋಜನೆಯನ್ನು ಹಮ್ಮಿಕೊಂಡಿದೆ.

**ವಿಧಾನ :**

ಸರ್ಕಾರವು ಇಸ್ರೋ ನೆರವಿನಿಂದ ರಾಜ್ಯದ 5 ಜಿಲ್ಲೆಗಳಲ್ಲಿ ಉಪಗ್ರಹ ಆಧಾರಿತ ದೂರದರ್ಶನ ಮೂಲಕ ಶಿಕ್ಷಣ ನೀಡುವ ಎಜುಸ್ಯಾಟ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದೆ. ಮೊದಲನೆ ಹಂತದಲ್ಲಿ ಪ್ರಾರಂಭಿಕವಾಗಿ ಚಾಮನಗರ ಜಿಲ್ಲೆಯ 885 ಪ್ರಾಥಮಿಕ ಶಾಲೆಗಳಲ್ಲಿ ಕೆಂಚೇನಹಳ್ಳಿ ಹೋಬಳಿ, ಹೆಚ್.ಡಿ. ಕೋಟೆ, ಬ್ಲಾಕ್‌ನ 3 ಶಾಲೆಗಳಲ್ಲಿ ಸೀಮಿತ ಅವಧಿಯಲ್ಲಿ ದೃಶ್ಯ ಮಾಧ್ಯಮದ ಮೂಲಕ ಪಾಠಗಳನ್ನು ಪ್ರಸಾರ ಮಾಡಿದ್ದು ಎರಡನೇ ಹಂತದಲ್ಲಿ ಗುಲ್ಬರ್ಗಾ ಜಿಲ್ಲೆಗೂ ಈ ಯೋಜನೆಯನ್ನು ವಿಸ್ತರಿಸಿ 3ನೇ ಹಂತದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 406, ರಾಮನಗರ 427 ಶಾಲೆಗಳಲ್ಲಿ ಜಿಲ್ಲೆಯ ಕಾರ್ಯಕ್ರಮವು ಕೆಳಕಂಡ ರೀತಿಗಳಲ್ಲಿ ನಡೆಯುವುದು. ಆದ್ದರಿಂದ ಸಂಬಂಧಪಟ್ಟವರು ಅವರವರ ಜವಾಬ್ದಾರಿಯನ್ನು ಅರಿತು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದೆ.

**ಕಾರ್ಯಕ್ರಮದ ಉದ್ದೇಶಗಳು :**

***ಈ ಕಾರ್ಯಕ್ರಮದಿಂದ ಕೆಳಕಂಡ ಉದ್ದೇಶಗಳನ್ನು ಈಡೇರಿಸುವಲ್ಲಿ ಪ್ರಯತ್ನಿಸಲಾಗುವುದು.***

- 3–8ನೇ ತರಗತಿವರೆಗೆ ಭಾಷೆ ಹಾಗೂ ಇತರೆ ವಿಷಯಗಳಲ್ಲಿ ವೀಡಿಯೋ ಚಿತ್ರಗಳನ್ನು ತಯಾರಿಸಿ ಪ್ರಸಾರ ಮಾಡುವುದು.
- ಬಹುವರ್ಗ ಬೋಧನೆಗೆ ಅನುಕೂಲವಾಗುವಂತೆ ಪಾಠಗಳನ್ನು ರಚಿಸುವುದು.
- ಹೊಸ ಮಾಧ್ಯಮದ ಮೂಲಕ ಬೋಧನೆಯನ್ನು ನೀಡುವುದು.
- ಅಂತರ್ ಕ್ರಿಯಾತ್ಮಕತೆಯನ್ನು ತರುವುದು.
- ವಿಷಯ ಪುನಶ್ಚೇತನ ತರಬೇತಿ ನೀಡುವುದು.

**ಮುಖ್ಯ ಶಿಕ್ಷಕರು, ಶಿಕ್ಷಕರ ಜವಾಬ್ದಾರಿಗಳು :**

ಈ ಕಾರ್ಯಕ್ರಮವು ಪ್ರಯೋಗಿಕವಾಗಿ ರಾಷ್ಟ್ರದಲ್ಲೇ ಪ್ರಥಮವಾಗಿ ಕರ್ನಾಟಕದ ಆಯ್ದ ಶಾಲೆಗಳಲ್ಲಿ ನಡೆಸುತ್ತಿರುವುದರಿಂದ ಶಾಲಾ ಮುಖ್ಯಸ್ಥರು ಈ ಬಗ್ಗೆ ಕೆಳಕಂಡ ಜವಾಬ್ದಾರಿಗಳನ್ನು ತೆಗೆದುಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸಲು ತಿಳಿಸಿದೆ. ಕಾರ್ಯಕ್ರಮದಲ್ಲಿ ಏನೇ ತೊಂದರೆ ಆದರೂ ಶಾಲಾ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ.

ಶಾಲೆಯಲ್ಲಿ ಎಜುಸ್ಯಾಟ್ ಉಪಕರಣಗಳು ಕಾರ್ಯನಿರ್ವಹಿಸುವಲ್ಲಿ ಸಮಸ್ಯೆಗಳು ಎದುರಾದಲ್ಲಿ ಆದ್ಯತೆಯ ಮೇರೆಗೆ ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳಿಗೆ ವಾಸ್ತವ ಮಾಹಿತಿಯನ್ನು ತಕ್ಷಣವೇ ನೀಡುವುದು.

ಶಾಲಾ ಮುಖ್ಯೋಪಾಧ್ಯಾಯರು ಶೈಕ್ಷಣಿಕ ಸಾಲಿನಲ್ಲಿ ಪ್ರಸಾರವಾಗುವ ಚಿತ್ರಗಳ ಬಗ್ಗೆ ಕೈಪಿಡಿಯಲ್ಲಿ ನೀಡಿರುವ ನಮೂನೆಯಲ್ಲಿ ಹಿಮ್ಮಾಹಿತಿಯನ್ನು ಕಡ್ಡಾಯವಾಗಿ ಕಳುಹಿಸುವುದು.

ಆಯಾ ವಿಷಯ ಶಿಕ್ಷಕರು ಪ್ರತ್ಯೇಕವಾದ ಹಿಮ್ಮಾಹಿತಿ ಕಡತವನ್ನು ನಿರ್ವಹಿಸಬೇಕು. ಶಾಲೆಯಲ್ಲಿ ಅದರ ಒಂದು ಪ್ರತಿಯನ್ನು ಇಟ್ಟು, ಇಲಾಖಾ ಅಧಿಕಾರಿಗಳು ತನಿಖೆ ನಡೆಸುವ ಸಂದರ್ಭದಲ್ಲಿ ಹಾಜರುಪಡಿಸಬೇಕು. ಹಿಮ್ಮಾಹಿತಿಯ ಇನ್ನೊಂದು ಪ್ರತಿಯನ್ನು ಪ್ರತಿ ತಿಂಗಳು ಮುಗಿದೊಡನೆ ಡಯಟ್ ಪ್ರಾಂಶುಪಾಲರಿಗೆ ರವಾನಿಸುವುದು.

ಡಯಟ್ ಪ್ರಾಂಶುಪಾಲರು ನೋಡಲ್ ಅಧಿಕಾರಿಗಳ ಮೂಲಕ ಶಾಲೆಗಳಿಂದ ಬಂದ

ಹಿಮ್ಮಾಹಿತಿಗಳನ್ನು ಸ್ವೀಕರಿಸಿ, ಮೂರು ತಿಂಗಳಿಗೊಮ್ಮೆ ಕ್ರೋಢೀಕರಿಸಿ, ಒಂದು ಕ್ರೋಢೀಕೃತ ನಮೂನೆಯ ಪ್ರತಿಯನ್ನು ತಮ್ಮ ಕಛೇರಿಯಲ್ಲಿ ಇಟ್ಟು, ಮತ್ತೊಂದು ಕ್ರೋಢೀಕೃತ ನಮೂನೆಯ ಪ್ರತಿಯನ್ನು ಡಿ.ಎಸ್.ಆರ್.ಟಿ.ಗೆ. ತಪ್ಪದೆ ರವಾನಿಸುವುದು.

**ಹಾರ್ಡ್‌ವೇರ್‌ಗೆ ಸಂಬಂಧಪಟ್ಟಂತೆ :**

1. ಪ್ರತಿ ಶಾಲೆಗೆ ಒಂದು ಬಣ್ಣದ ಟಿ.ವಿ.ಯನ್ನು ವಿತರಿಸಲಾಗಿದೆ. ಈ ಟಿ.ವಿ.ಯನ್ನು ಎಜುಸ್ಯಾಟ್‌ಗೆ ನಿಗದಿಪಡಿಸಿ , 60 ಮಕ್ಕಳು ವೀಕ್ಷಿಸಲು ಸಾಧ್ಯವಾಗುವ ಸುಸಜ್ಜಿತ ಕೊಠಡಿಯಲ್ಲಿ ಅಳವಡಿಸಲಾಗಿದ್ದು ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವುದು.
2. ಟಿ.ವಿ.ಯನ್ನು ಒಂದು ಕೊಠಡಿಯಲ್ಲಿ ಅಳವಡಿಸಿದ ಮೇಲೆ, ಕೊಠಡಿಯಿಂದ ಕೊಠಡಿಗೆ ಬದಲಾಯಿಸಬಾರದು.
3. ಎಜುಸ್ಯಾಟ್ ಕಾರ್ಯಕ್ರಮ ಪ್ರಸಾರವಾಗುವಾಗ ಮತ್ತು ಇತರೆ ಸಮಯದಲ್ಲಿ ಸಂಬಂಧಪಟ್ಟ ಯಾರಾದರೂ ಒಬ್ಬರು ಜವಾಬ್ದಾರಿಯುತವಾಗಿ ಈ ಟಿ.ವಿ.ಯನ್ನು ನಿರ್ವಹಿಸುವುದು.
4. ಟಿ.ವಿ.ಯನ್ನು ಎಲ್ಲರೂ ವೀಕ್ಷಿಸಲು ಸಾಧ್ಯವಾಗುವಂತೆ ಇಡುವುದು. ಮೇಲಿಂದ ಮೇಲೆ ಧೂಳು ಒರೆಸುವುದು. ಟಿ.ವಿ. ಮೇಲೆ ಸಂಬಂಧವಿರದ ಯಾವುದೇ ವಸ್ತುಗಳನ್ನು ಇಡಬಾರದು.
5. ಎಜುಸ್ಯಾಟ್ ಕೊಠಡಿಯನ್ನು ಅಗತ್ಯವಿದ್ದಲ್ಲಿ ಎಸ್.ಡಿ.ಎಂ.ಸಿ.ಯವರನ್ನು ಕೋರಿಕೊಂಡು ಅಥವಾ ಶಾಲಾ ಸಂಚಿತ ನಿಧಿಯಿಂದ ದುರಸ್ಥಿ ಮಾಡಿಸುವುದು ಮತ್ತು ಸುರಕ್ಷತೆಯ ವ್ಯವಸ್ಥೆ ಮಾಡುವುದು.
6. ಕಾರ್ಯಕ್ರಮ ಪ್ರಸಾರವಾಗುವುದಕ್ಕೆ 05 ನಿಮಿಷ ಮೊದಲು ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಕ್ಕಳನ್ನು ಈ ಕೊಠಡಿಗೆ ಬಂದು ವೀಕ್ಷಿಸಲು ತಿಳಿಸುವುದು.
7. ಡಿಶ್ ಅಂಟೇನಾ ಮತ್ತು ಟಿ.ವಿ. ಅಳವಡಿಕೆಗೆ ಬರುವವರೊಂದಿಗೆ ಸೌಜನ್ಯದಿಂದ ವರ್ತಿಸತಕ್ಕದ್ದು ಹಾಗೂ ಅವರಿಗೆ ಅಗತ್ಯ ಸಹಕಾರ ನೀಡತಕ್ಕದ್ದು.
8. ಎಲ್. ಎನ್.ಬಿ. ಎಫ್., ನ್ನು ಮುಟ್ಟಬಾರದು. ಅರ್ಥಿಂಗ್ ಮಾಡಿದಲ್ಲಿ ಪ್ರತಿವಾರಕ್ಕೊಮ್ಮೆ ನೀರುಣಿಸುವುದು.
9. ಚಾನಲ್ ಬದಲಾಯಿಸಲೇಬಾರದು.
10. ಡಿಶ್ ಆಂಟೇನಾ ನೆಲದಲ್ಲಿ ಅಳವಡಿಸಿದ್ದಲ್ಲಿ ಸುತ್ತಲೂ ತಂತಿಬೇಲಿ ಹಾಕುವುದು.

11. ಇಲಾಖೆಯ ಅನುಮತಿ ಇಲ್ಲದೆ ROT ಗಳನ್ನು ಸ್ಥಳಾಂತರಿಸಬಾರದು. ಸ್ಥಳಾಂತರ ಅನಿವಾರ್ಯವಾಗಿದ್ದಲ್ಲಿ ಇಲಾಖೆಯ ಅನುಮತಿ ಪಡೆದುಕೊಳ್ಳುವುದು ಕಡ್ಡಾಯ

12. ತಾಂತ್ರಿಕ ಸಮಸ್ಯೆಗಳಿಗೆ 18004252378 Helpline ಗೆ ಸಂಪರ್ಕಿಸುವುದು (ಇದು Tolefree Number) COSMIC ಸಂಸ್ಥೆಯ ಪ್ರತಿನಿಧಿಗಳ ದೂ. ಸಂ. 9341475557

***(ವಿಶೇಷ ಸೂಚನೆ)***

13. ಇನ್ನು ಮುಂದೆ ROTಗಳನ್ನು ಇಲಾಖೆಯ ಅನುಮತಿ ಇಲ್ಲದೇ ಸ್ಥಳಾಂತರಿಸುವಂತಿಲ್ಲ . ಸ್ಥಳಾಂತರ ಅನಿವಾರ್ಯವಾಗಿದ್ದಲ್ಲಿ ಇಲಾಖೆಯ ಅನುಮತಿಗಾಗಿ ಕೋರಿಕೆ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಕೋರಿಕೆಯನ್ನು ಪರಿಶೀಲಿಸಿ ROTಗಳ ವಾರ್ಷಿಕ ನಿರ್ವಹಣೆಯನ್ನು (AMC) ಮಾಡುವಂತಹ COSMIC INFOSYSTEM PVT. LTD., Bangalore ಸಂಸ್ಥೆಯು ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳುತ್ತದೆ.

**ಸಾಫ್ಟ್‌ವೇರ್‌ಗೆ ಸಂಬಂಧಪಟ್ಟಂತೆ :**

1. ಇಲಾಖೆಯು 3 ರಿಂದ 8ನೇ ತರಗತಿಯವರೆಗಿನ ಕನ್ನಡ, ಗಣಿತ, ವಿಜ್ಞಾನ, ಪರಿಸರ ಅಧ್ಯಯನ, ಆಂಗ್ಲಭಾಷೆ ಹಾಗೂ ಇತರೆ ವಿಷಯಗಳಲ್ಲಿ ಪಠ್ಯಾಧಾರಿತ ಶೈಕ್ಷಣಿಕ ವೀಡಿಯೋ ಚಿತ್ರಗಳನ್ನು ಪ್ರಸಾರ ಮಾಡುವುದು.

2. ಯಾವ ದಿನ, ಯಾವ ವಿಷಯ, ಯಾವ ಪಾಠ, ಯಾವ ಸಮಯದಲ್ಲಿ ಪ್ರಸಾರವಾಗುತ್ತದೆ ಮತ್ತು ಶಿಕ್ಷಕರು ಯಾವ ರೀತಿ ಸಿದ್ಧತೆಯನ್ನು ಮಾಡಿಕೊಳ್ಳಬೇಕು ಎಂಬುದರ ಪೂರ್ಣ ವಿವರವುಳ್ಳ ಕೈಪಿಡಿಯನ್ನು ಮೊದಲೇ ಶಾಲೆಗೆ ವಿತರಿಸಲಾಗುವುದು.

3. ಕೈಪಿಡಿಯನ್ನು ಸಂಬಂಧಪಟ್ಟ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರು ಓದಿಕೊಂಡು ಯಾವ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳುವುದು ಎಂಬುದನ್ನು ಮೊದಲೇ ನಿರ್ಧರಿಸಿಕೊಳ್ಳುವುದು.

4. ಪಾಠ ಪ್ರಸಾರಕ್ಕಿಂತಲೂ ಮೊದಲು ಆಯಾ ಪಾಠದ ಬಗ್ಗೆ ಇರುವ ಪೂರ್ವ ಚಟುವಟಿಕೆಗಳನ್ನು ಕಡ್ಡಾಯವಾಗಿ ಮಾಡಿಸುವುದು.

5. ಪಾಠ ಪ್ರಸಾರಕ್ಕಿಂತಲೂ ಮೊದಲು ಆಯಾ ಪಾಠದ ಬಗ್ಗೆ ಇರುವ ಪೂರ್ವ ಚಟುವಟಿಕೆಗಳನ್ನು ಕಡ್ಡಾಯವಾಗಿ ಮಾಡಿಸುವುದು.

6. ಪ್ರಸಾರ ಕಾಲದಲ್ಲಿ ಮಕ್ಕಳೊಂದಿಗೆ ಸಂಬಂಧಿಸಿದ ಶಿಕ್ಷಕರು ಪ್ರಸಾರವನ್ನು ವೀಕ್ಷಿಸುತ್ತಾ ಅಗತ್ಯ ಟಿಪ್ಪಣಿಗಳನ್ನು ಮಾಡಿಕೊಳ್ಳುವಂತೆ ತಿಳಿಸುವುದು.

7. ಪಾಠ ಪ್ರಸಾರದ ನಂತರ 10 ನಿಮಿಷಗಳ ಅವಧಿಯಲ್ಲಿ ಮಕ್ಕಳೊಂದಿಗೆ ಸಂಬಂಧಪಟ್ಟ ಶಿಕ್ಷಕರು ಚರ್ಚಿಸಿ ಸಂದೇಹಗಳನ್ನು ಬಗೆಹರಿಸುವಂತೆ ತಿಳಿಸುವುದು.

8. ಪಾಠ ಪ್ರಸಾರದ ಅವಧಿಯ ನಂತರ ಪ್ರಸಾರೋತ್ತರ ಚಟುವಟಿಕೆಗಳನ್ನು ಕಡ್ಡಾಯವಾಗಿ ಮಾಡಿಸುವುದು.

9. ಮುಂದಿನ ದಿನಗಳಲ್ಲಿ ಯಾವ ಪಾಠ ಯಾವ ಸಮಯದಲ್ಲಿ ಪ್ರಸಾರ ಆಗುತ್ತದೆ ಎಂಬುದನ್ನು ಮಕ್ಕಳಿಗೆ ತಿಳಿಸುವುದು.

10. ಮಕ್ಕಳು ಪಾಠಗಳನ್ನು ವೀಕ್ಷಿಸುತ್ತಾ , ಬರುವ ಸಂದೇಹಗಳನ್ನು ಟಿಪ್ಪಣಿ ಮಾಡಿಕೊಳ್ಳಲು ತಿಳಿಸುವುದು.

11. ಈ ಸಂದೇಹಗಳನ್ನು ಪ್ರಸಾರದ ನಂತರ ಚರ್ಚಿಸಿ ಬಗೆಹರಿಸುವುದು.

**ಇತರೆ ಕಾರ್ಯಗಳು :**

1. ಎಜುಸ್ಯಾಟ್ ಕೊಠಡಿಗೆ 'ಎಜುಸ್ಯಾಟ್ ಕೊಠಡಿ' ಎಂದು ಬೋರ್ಡ್ ಬರೆದು ಹಾಕುವುದು.

2. ಎಜುಸ್ಯಾಟ್ ಕೊಠಡಿಯನ್ನು ಶಿಕ್ಷಣ ತಂತ್ರಜ್ಞಾನ ಕೊಠಡಿಯಾಗಿ ಮಾರ್ಪಡಿಸವುದು.

3. ಎಜುಸ್ಯಾಟ್ ಕೊಠಡಿಗೆ ಸಂಬಂಧಪಟ್ಟ ಸಾಮಗ್ರಿಗಳು ಕಳ್ಳತನವಾಗದಂತೆ ಅಗತ್ಯ ಭದ್ರತಾ ಕ್ರಮಗಳನ್ನುಕೈಗೊಳ್ಳುವುದು.

4. ಪ್ರಸಾರಕ್ಕೆ ಅಡ್ಡಿಯಾಗುವ ಯಾವುದೇ ತೊಂದರೆಗಳು ಕಂಡುಬಂದಲ್ಲಿ ತಕ್ಷಣವೇ ಈ ಕಛೇರಿಯ ಸಂಬಂಧಿತ ಅಧಿಕಾರಿಗಳಿಗೆ ಹಾಗೂ ತಮ್ಮ ಜಿಲ್ಲೆಯ ಬಿ.ಇ.ಓ., ಡಿ.ವೈ.ಪಿ.ಸಿ., ಬಿ.ಆರ್.ಸಿ. ಡಯಟ್ ಪ್ರಾಂಶುಪಾಲರಿಗೆ ತಿಳಿಸುವುದು.

5. ಆಕಸ್ಮಾತ್ ಪ್ರಸಾರ ನಿಂತು ಹೋದಲ್ಲಿ ಪ್ರಸಾರವಾಗುವ ಪಾಠದ ಬಗ್ಗೆಯೇ ಮಕ್ಕಳೊಂದಿಗೆ ಚರ್ಚಿಸುವುದು.

6. ಎಜುಸ್ಯಾಟ್ ಕಾರ್ಯಕ್ರಮಗಳ ಗುಣಾಗುಣಗಳ ಬಗ್ಗೆ ಟಿಪ್ಪಣಿಯನ್ನು ಬರೆದು ಮಾಸಿಕ ವರದಿಯನ್ನು ಬರೆದು ಸಂಬಂಧಿತ ಡಯಟ್ ಪ್ರಾಂಶುಪಾಲರಿಗೆ ಒಂದು ಪ್ರತಿ ಹಾಗೂ ಡಿ.ಎಸ್.ಇ.ಆರ್.ಟಿ.ಗೆ ಇನ್ನೊಂದು ಪ್ರತಿಯನ್ನು ಕಳುಹಿಸಿಕೊಡಬೇಕು. ಮಾರ್ಪಡಿಸಲು ಸಾಧ್ಯವಾಗುವ ಸಲಹೆಗಳಿದ್ದಲ್ಲಿ ಇವುಗಳನ್ನು ಈ ವರದಿಯಲ್ಲಿ ಸ್ಪಷ್ಟವಾಗಿ ನಮೂದಿಸಿ ಕಳುಹಿಸುವುದು.

**ಬಿ.ಆರ್.ಸಿ., ಬಿ.ಇ.ಓ., ಡಯಟ್ ಪ್ರಾಂಶುಪಾಲರು ಮತ್ತು ಉಪನಿರ್ದೇಶಕರ ಜವಾಬ್ದಾರಿಗಳು:**

1. ಕೈಪಿಡಿ ಸಾಹಿತ್ಯಗಳು ಬಂದಾಗ ತಕ್ಷಣ ಸಂಬಂಧಿಸಿದವರಿಗೆ ವಿತರಿಸುವುದು.

2. ಕೈಪಿಡಿ ಸಾಹಿತ್ಯದ ನೀಡಿದ ವಿವರಗಳೆಲ್ಲವನ್ನು ಓದಿ ಮಾಸಿಕ ಸಭೆಯಲ್ಲಿ ಎಜುಸ್ಯಾಟ್ ಕಾರ್ಯಕ್ರಮದ ಬಗ್ಗೆ ವಿವರವಾಗಿ ಚರ್ಚಿಸುವುದು ಮತ್ತು ಅಗತ್ಯ ಸಲಹೆಗಳಿದ್ದಲ್ಲಿ ವರದಿಯನ್ನು ಈ ಕಛೇರಿಗೆ ಕಳುಹಿಸುವುದು.

3. ಕಾರ್ಯಕ್ರಮ ಪ್ರಸಾರವಾಗುವ ಶಾಲೆಗಳಲ್ಲಿ ಕೈಪಿಡಿಯಲ್ಲಿ ತಿಳಿಸಿದಂತೆ ವೇಳಾಪಟ್ಟಿಯಲ್ಲಿ ಎಜುಸ್ಯಾಟ್ ಪ್ರಸಾರಕ್ಕೆ ಕಡ್ಡಾಯವಾಗಿ ಅವಕಾಶ ಮಾಡಿಕೊಡುವುದು.

4. ತಪಾಸಣೆ ಸಂದರ್ಭದಲ್ಲಿ ಕಡ್ಡಾಯವಾಗಿ ಎಜುಸ್ಯಾಟ್ ಕಾರ್ಯಕ್ರಮದ ಪ್ರಗತಿ ಪರಿಶೀಲಿಸುವುದು. ಒಟ್ಟಾರೆ ಎಜುಸ್ಯಾಟ್ ಕಾರ್ಯಕ್ರಮವು ಕರ್ನಾಟಕ ರಾಜ್ಯದ ಶಿಕ್ಷಣ ಇಲಾಖೆಯ ಪ್ರತಿಷ್ಠಿತ ಕಾರ್ಯಕ್ರಮವಾಗಿರುವುದರಿಂದ ಎಲ್ಲಾ ರೀತಿಯಿಂದ ಶ್ರಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ತಿಳಿಸಿದೆ.

ಸಹಿ/–

ನಿರ್ದೇಶಕರು

(ಸಂ. ಮತ್ತುತ)

**ಪ್ರತಿಗಳು :**

1. ಚಾಮರಾಜನಗರ, ಗುಲ್ಬರ್ಗಾ, ಯಾದಗಿರಿ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಎಲ್ಲಾ ಹಿರಿಯ ಪ್ರಾಥರ್ಮಿಕ ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ.